

ವಾರಿಜಾಶ್ರೀ

ಪರಿಚಯವಿತ್ತು. ಅದು ಇಲ್ಲದೇ ಇರುವ ಮಕ್ಕಳು ಸಹಜವಾಗಿಯೇ ಇಂತಹ ಸಂಗೀತವೊಂದರ ಗುಂಗಿಗೇ ಬೀಳುತ್ತಾರೆ. ಪಾಶ್ಚಾತ್ಯ ಸಂಗೀತದಲ್ಲೂ ಹಲವು ಬಗೆ. ಎಷ್ಟೋ ಸಲ ಚಿಕ್ಕ ವಯಸ್ಸಿನಲ್ಲಿ ಇಂತಹ ಹಾಡುಗಳನ್ನು ನೋಡುವವರು ಗಾಯಕ–ಗಾಯಕಿಯರ ಲುಕ್ಸ್ ನೋಡಿ ಫಿದಾ ಆಗುತ್ತಾರೆ. ಅವರು ಏನು ಹಾಡುತ್ತಿದ್ದಾರೆ ಎನ್ನುವ ಶಾಸ್ತ್ರೀಯ ಪ್ರಶ್ನೆ ಮುಖ್ಯವಾಗುವುದಿಲ್ಲ. ಇಂತಹ ಹಾಡುಗಳು ನಮ್ಮೊಳಗೆ ವೈಬ್ಸ್ ಸೃಷ್ಟಿಸುತ್ತವೆ. ತಂತಾನೇ ಕುಣಿಯಬೇಕೆಂಬ ಬಯಕೆ ಹುಟ್ಟಿಸುವ ಅಲೆಗಳಿವು.

ಶ್ರೀಲಂಕನ್, ಕೊರಿಯನ್ ಮೊದಲಾದ ಸಂಗೀತಗಳನ್ನು ಸಾಮಾಜಿಕ ಜಾಲತಾಣಗಳು ಈಗ ನಮ್ಮೆದುರಲ್ಲಿ ಇಟ್ಟಿವೆ. ಬಹಳ ಹಿಂದೆ ನಾವು ಪಾಪ್ಯುಲರ್ ಮ್ಯೂಸಿಕ್ ಎಂದರೆ ರೊಮ್ಯಾಂಟಿಕ್ ಗೀತೆಗಳನ್ನೇ ಹೆಚ್ಚಾಗಿ ಕೇಳುತ್ತಿದ್ದೆವು. ಐಟಂ ಸಾಂಗ್‌ಗಳು ನನಗಂತೂ ಅರ್ಥವಾಗುತ್ತಿರಲಿಲ್ಲ. ಅಷ್ಟೇ ಏಕೆ, ‘ಕಾಗದದ ದೋಣಿಯಲ್ಲಿ ನಾ ಕೂರುವಂಥ ಹೊತ್ತಾಗಿದೆ’ ಎಂಬ ಸಾಲಿನ ಮರ್ಮವೇ ನನಗೆ ಅರ್ಥ ಆಗಿರಲಿಲ್ಲ. ಹೀಗಿರುವಾಗ ಇಂಗ್ಲಿಷ್ ಕಲಿಯಬೇಕೆಂಬ ನಿಶ್ಚಯ, ಕಾಣುವ–ಕೇಳುವ ಹಲವು ಬಗೆಯ ಸಂಗೀತ ನಮ್ಮನ್ನು ಕುಣಿಸುವಂತಿದ್ದರೆ ಅದನ್ನು ಇಷ್ಟಪಡತೊಡಗುತ್ತೇವೆ. ಈಗ ಚಿಕ್ಕ ವಯಸ್ಸಿನವರು ಆಯ್ಕೆ ಮಾಡಿಕೊಳ್ಳುತ್ತಿರುವ ಸಂಗೀತ ಹೆಚ್ಚಾಗಿ ಇಂಥದ್ದೇ ಆಗಿರಬಹುದೇನೊ?’

## ‘ನಾನೂ ಬೇರೆ ಸಂಗೀತ ಕೇಳಿ ಬೆಳೆದವನೇ’

ಲಿಂಕಿನ್ ಪಾರ್ಕ್, ಪಿಂಕ್ ಫ್ಲಾಯಿಡ್, ಎಮಿನೆಮ್ ತರಹದ ಪಾಶ್ಚಾತ್ಯ ಸಂಗೀತವನ್ನು ಕೇಳುತ್ತ, ಅದರ ಪ್ರಭಾವಕ್ಕೂ ಒಳಗಾದವರು ಈಗ ಜನಪ್ರಿಯ ಹಿನ್ನೆಲೆ ಗಾಯಕ ಕೂಡ ಆಗಿರುವ ಸಂಚಿತ್ ಹೆಗಡೆ. ‘ಇವತ್ತು ಎಲ್ಲವೂ ನಮ್ಮ ಕೈಗೆ, ಕಣ್ಣಿಗೆ ಸಿಗುವಂತಿದೆ. ಎವ್ರಿಥಿಂಗ್ ಈಸ್ ಆ್ಯಕ್ಸಿಸಬಲ್ ನೌ’ ಎನ್ನುತ್ತಲೇ ಅವರು ತಾವು ಈ ಸಂಗೀತದ ಪ್ರಭಾವವನ್ನು ಪಡೆದ ದಾರಿಯನ್ನು ಹಂಚಿಕೊಂಡರು.

ಬಿಲ್‌ಬೋರ್ಡ್ ವುಮನ್ ಮ್ಯೂಸಿಕ್ ಅವಾರ್ಡ್‌ನಲ್ಲಿ ಖ್ಯಾತ ಗಾಯಕಿ ಸಿಕ್‌ಬ್ರೇನ್





ಯುವ ತಲೆಮಾರಿನ ಲಯವನ್ನು ಹಿಡಿದಂತೆ ಹಾಡುವ ಕನ್ನಡದ ಹುಡುಗ ಸಂಚಿತ್ ಹೆಗಡೆ